KAMD610010882017

**<u>1 ನೇ ಅಪರ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಪಾಂಡವಪುರ</u>**

ಉಪಸ್ಥಿತರುಃ **ಶ್ರೀಮತಿ.ಪಾರ್ವತಮ್ಮ.ಬಿ.,**
ಬಿ.ಎ., ಎಲ್.ಎಲ್.ಎಂ.
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಪಾಂಡವಪುರ.**

ದಿನಾಂಕಃ 19 ನೇ ಜನವರಿ - 2026 ನೇ ಇಸವಿ.

**<u>ಸಿ.ಸಿ.ಸಂಃ 509/2017</u>**

ಕರ್ನಾಟಕ ರಾಜ್ಯದ ಪರವಾಗಿ
ಪಾಂಡವಪುರ ಪೊಲೀಸ್ ಠಾಣೆ
ಪಾಂಡವಪುರ. - ದೂರುದಾರರು

(ಸರ್ಕಾರದ ಪರವಾಗಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)

- ವಿರುದ್ಧ -

ಜೀವನ್ ಕುಮಾರ್ ಬಿನ್ ಲೇಃ ಬೊರೇಗೌಡ,
ಸುಮಾರು 27 ವರ್ಷ,
ವಾಸಃ ಹಾರೋಹಳ್ಳಿ ಗ್ರಾಮ,
ಪಾಂಡವಪುರ ತಾಲ್ಲೂಕು. - ಆರೋಪಿ

(ಆರೋಪಿ ರವರ ಪರ ವಕೀಲರುಃ ಶ್ರೀ.ಬಿ.ಎಸ್.)

| | | | |
|---|---|---|---|
| 1. | ಅಪರಾಧ ಪ್ರಾರಂಭಗೊಂಡ ದಿನಾಂಕ | - | 22-05-2017 |
| 2. | ಅಪರಾಧ ವರದಿಗೊಂಡ ದಿನಾಂಕ | - | 22-05-2017 |
| 3. | ದೂರುದಾರರ ಹೆಸರು | - | ನಾಗೇಗೌಡ |
| 4. | ಸಾಕ್ಷಿ ವಿಚಾರಣೆ ಪ್ರಾರಂಭಗೊಂಡ ದಿನಾಂಕ | - | 23-07-2025 |

5. ಸಾಕ್ಷಿ ವಿಚಾರಣೆ ಮುಕ್ತಾಯಗೊಂಡ ದಿನಾಂಕ - 25-11-2025

6. ಆಪಾದಿಸಲಾದ ಅಪರಾಧದ ಕಾಯ್ದೆಗಳು - ಭಾ.ದಂ.ಸಂ.ಕಲಂ 323,326,504 ಹಾಗೂ 506

7. ನ್ಯಾಯಾಧೀಶರ ಅಭಿಪ್ರಾಯ - ಆರೋಪಿ ನಿರ್ದೋಷಿ

**ತೀರ್ಪು**

ಪ್ರಸ್ತುತ ಪ್ರಕರಣವು, ಪಾಂಡವಪುರ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ.323, 326, 504 ಹಾಗೂ 506 ರ ಕಾಯ್ದೆ ಮೇರೆಗೆ ದಂಡನೀಯವಾದ ಅಪರಾಧ ಎಸಗಿದ್ದಾರೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2.** **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ:-**

ದಿನಾಂಕ: 22-05-2017 ರಂದು ಬೆಳಿಗ್ಗೆ ಸುಮಾರು 11-30 ಗಂಟೆ ಸಮಯದಲ್ಲಿ ಹಾರೋಹಳ್ಳಿ ಗ್ರಾಮದ ಚಾಸಾ-1 ರವರ ಮನೆ ಮುಂದೆ ಆರೋಪಿಯು ಆಸ್ತಿ ವೈಷಮ್ಯ ಇಟ್ಟುಕೊಂಡು ಅವಾಚ್ಯ ಶಬ್ದಗಳಿಂದ ಚಾಸಾ-1 ಹಾಗೂ 2 ರವರನ್ನು ಬೋಳಿಮಗನೆ, ಸೂಳೆಮಗನೆ, ಸೂಳೆಮುಂಡೆ ಎಂದು ಬೈದಿದ್ದು, ಕೈನಿಂದ ಚಾಸಾ-1 ರವರ ಮುಖವನ್ನು ಪರಚಿ, ಅಲ್ಲೆ ಇದ್ದ ಸಿಮೆಂಟ್ ಪಾಟ್‌ನಿಂದ ಚಾಸಾ-1 ರವರ ಬಲಕೈಗೆ ಹೊಡೆದು ನೋವುಂಟುಮಾಡಿದ್ದು, ಆಸ್ತಿ ಕೇಸನ್ನು ವಾಪಸ್ಸು ಪಡೆದುಕೊಳ್ಳದಿದ್ದರೆ ನಿಮ್ಮನ್ನು ಜೀವಂತವಾಗಿ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿ ತೀವ್ರ ಸ್ವರೂಪದ ಗಾಯವುಂಟು ಮಾಡಿರುತ್ತಾರೆಂದು ಆರೋಪಿಸಿ ಈ ಮೂಲಕ ಪಾಂಡವಪುರ ಪೊಲೀಸ್ ಠಾಣಾ ಪೊಲೀಸರು ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**3.** ತನಿಖಾಧಿಕಾರಿಯವರು ತನಿಖಾ ಕಾರ್ಯ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ನ್ಯಾಯಾಲಯವು ಭಾ.ದಂ.ಸಂ.ಕಲಂ.323, 326, 504 ಹಾಗೂ 506 ರ ಕಾಯ್ದೆ ರಡಿಯಲ್ಲಿನ ಅಪರಾಧಕ್ಕಾಗಿ ಸಂಜ್ಞೆಯನ್ನು ತೆಗೆದುಕೊಂಡಿದೆ. ನಂತರ ದಂ.ಪ್ರ.ಸಂ.ಕಲಂ.207 ರಂತೆ ಆರೋಪಿಗೆ ದೋಷಾರೋಪಣಾ ಪಟ್ಟಿಯ ನಕಲುಗಳನ್ನು ನೀಡಲಾಗಿದೆ.

**4.** ಆರೋಪಿಯ ವಿರುದ್ಧ ನ್ಯಾಯಾಲಯವು ಭಾ.ದಂ.ಸಂ.ಕಲಂ.323, 326, 504 ಹಾಗೂ 506 ರ ಕಾಯ್ದೆ ರಡಿಯಲ್ಲಿನ ಅಪರಾಧಕ್ಕಾಗಿ ಆರೋಪಣೆಯನ್ನು ರಚಿಸಿ ನಂತರ ಆರೋಪಿಗೆ ತಿಳಿಯಪಡಿಸಿ ಓದಿ ವಿವರಿಸಿ ಹೇಳಲಾಗಿದ್ದು, ನಂತರ ಆರೋಪಿಯು ತಾವು ತಪ್ಪು ಮಾಡಿರುವುದಿಲ್ಲ ವಿಚಾರಣೆಯಾಗಬೇಕೆಂದು ಉತ್ತರಿಸಿರುತ್ತಾರೆ.

**5.** ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಬೆಂಬಲಿಸಿ ದೂರುದಾರರಾದ ಚಾಸಾ-1 **ನಾಗೇಗೌಡ** ರವರನ್ನು ಫ್ರಾಸಾ-1 ಎಂದು, ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-2 **ಜಯಮ್ಮ** ರವರನ್ನು ಫ್ರಾಸಾ-2 ಎಂದು, ಚಾಸಾ-3 **ಶರತ್.ಹೆಚ್.ಎನ್** ರವರನ್ನು ಫ್ರಾಸಾ-3 ಎಂದು, ಸ್ಥಳ ಪಂಚನಾಮೆ ಸಾಕ್ಷಿದಾರರಾದ ಚಾಸಾ-4 **ರಂಜಿತ್** ರವರನ್ನು ಫ್ರಾಸಾ-6 ಎಂದು, ವೈಧ್ಯಾಧಿಕಾರಿಗಳಾದ ಚಾಸಾ-6 **ಡಾ.ಮಂಜುನಾಥ** ರವರನ್ನು ಫ್ರಾಸಾ-4 ಎಂದು ಹಾಗೂ ತನಿಖಾಧಿಕಾರಿಯಾದ ಚಾಸಾ-7 **ಹೆಚ್.ಕೆ ರಘು** ರವರನ್ನು ಫ್ರಾಸಾ-5 ಎಂದು ವಿಚಾರಣೆ ಮಾಡಿ, ಅವರ ಮೂಲಕ ನಿಪಿ-1 ರಿಂದ ನಿಪಿ-8 ರ ದಾಖಲೆಗಳನ್ನು ಸಾಕ್ಷ್ಯದಲ್ಲಿ ಹಾಜರುಪಡಿಸಿದ್ದು ಹಾಗೂ ಮು.ಮಾ-1 ನ್ನು ಗುರುತಿಸಿಕೊಂಡಿರುತ್ತಾರೆ. ವಿಚಾರಣೆ ಮಾಡಲಾದ ಫ್ರಾಸಾ-1 ರಿಂದ 5 ರವರ ಸಾಕ್ಷ್ಯದಲ್ಲಿ ಆರೋಪಿಯ ಹಿತಾಸಕ್ತಿಗೆ ವಿರುದ್ಧವಾದ ಅಂಶಗಳು ಇರುವುದರಿಂದ ಆರೋಪಿಯನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿಯಲ್ಲಿ ವಿಚಾರಣೆ ಮಾಡಿ ಆರೋಪಿಯ ಉತ್ತರವನ್ನು ದಾಖಲು ಮಾಡಿಕೊಳ್ಳಲಾಗಿದೆ ಮತ್ತು ಆರೋಪಿಯು ತಮ್ಮ ಪರ ಯಾವುದೇ ಸಾಕ್ಷ್ಯ ವಿಚಾರಣೆ ಇಲ್ಲ ಎಂದು ಉತ್ತರಿಸಿರುತ್ತಾರೆ.

**6.** ಉಭಯ ಪಕ್ಷಗಾರರ ವಾದವನ್ನು ಆಲಿಸಿ ಕಡತವನ್ನು ಪರಿಶೀಲನೆ ಮಾಡಲಾಗಿ ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ಗಮನಕ್ಕೆ ಬಂದಿರುತ್ತದೆ.

**1.** ಆರೋಪಿಗಳು ಅಪರಾಧವನ್ನು ಎಸಗುವ ಉದ್ದೇಶದಿಂದ, ದಿನಾಂಕಃ 22.05.2017 ರಂದು ಬೆಳಿಗ್ಗೆ ಸುಮಾರು 11-30 ಗಂಟೆ ಸಮಯದಲ್ಲಿ ಹಾರೋಹಳ್ಳಿ ಗ್ರಾಮದ ಚಾಸಾ-1 ರವರ ಮನೆ ಮುಂದೆ ಆರೋಪಿಯು ಆಸ್ತಿ ದ್ವೇಷಮ್ಮ ಇಟ್ಟುಕೊಂಡು ಅವಾಚ್ಯವಾಗಿ ಚಾಸಾ-1 ಹಾಗೂ 2 ರವರನ್ನು ಬೋಳಿಮಗನೇ, ಸೂಳೆಮಗನೇ, ಸೂಳೆಮುಂಡೆ ಎಂದು ಬೈದಿರುವ ಕಾರಣ, ಆರೋಪಿಯು ಭಾರತೀಯ ದಂಡ ಸಂಹಿತೆಯ ಕಲಂ.504 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದಾರೆ ಎಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸಿದ್ದಾರೆಯೇ ?

**2.** ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಆರೋಪಿಯು ಅಪರಾಧವನ್ನು ಎಸಗುವ ಉದ್ದೇಶದಿಂದ, ಚಾಸಾ-1 ರವರನ್ನು ಕೈಯಿಂದ ಮುಖವನ್ನು ಪರಚಿರುವ ಕಾರಣ, ಆರೋಪಿಯು ಭಾರತೀಯ ದಂಡ ಸಂಹಿತೆಯ ಕಲಂ.323 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದಾರೆ ಎಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸಿದ್ದಾರೆಯೇ ?

**3.** ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಆರೋಪಿಯು ಅಪರಾಧವನ್ನು ಎಸಗುವ ಉದ್ದೇಶದಿಂದ, ಅಲ್ಲೆ ಇದ್ದ ಸಿಮೆಂಟ್ ಪಾಟ್ ನಿಂದ ಚಾಸಾ-1 ರವರ ಬಲಕೈಗೆ ಹೊಡೆದು ನೋವುಂಟುಮಾಡಿರುವ ಕಾರಣ, ಆರೋಪಿಯು ಭಾರತೀಯ ದಂಡ ಸಂಹಿತೆಯ ಕಲಂ.326 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದಾರೆ ಎಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸಿದ್ದಾರೆಯೇ ?

**4.** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯು ಅಪರಾಧವನ್ನು ಎಸಗುವ ಉದ್ದೇಶದಿಂದ, ಚಾಸಾ-1 ರವರನ್ನು ಉದ್ದೇಶಿಸಿ ಆಸ್ತಿ ಕೇಸನ್ನು ವಾಪಸ್ಸು ಪಡೆದುಕೊಳ್ಳದಿದ್ದರೆ ನಿಮ್ಮನ್ನು ಜೀವಂತವಾಗಿ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿರುವ ಕಾರಣ, ಆರೋಪಿಗಳು ಭಾರತೀಯ ದಂಡ ಸಂಹಿತೆಯ ಕಲಂ.506 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದಾರೆ ಎಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸಿದ್ದಾರೆಯೇ ?

**5.** ಯಾವ ಆದೇಶ?

**7.** ಮೇಲ್ಕಂಡ ಅಂಶಗಳಿಗೆ ನಾನು ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ ನಂಃ 1 ರಿಂದ 4 - ನಕಾರಾತ್ಮಕವಾಗಿ
ಅಂಶ ನಂಃ 5 - ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗಾಗಿ

**<u>ಕಾರಣಗಳು</u>**

**8.** **<u>ಅಂಶ ನಂಃ1 ರಿಂದ 4-</u>** ಸಾಕ್ಷ್ಯದ ವಿಮರ್ಶೆಯ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಮತ್ತು ಅಂಶ-1 ರಿಂದ 4 ರವರೆಗಿನ ಸಾರಾಂಶಗಳು ಪರಸ್ಪರ ಹೊಂದಿಕೊಂಡಿರುವ ಕಾರಣ ಅವುಗಳನ್ನು ಒಟ್ಟಿಗೆ ವಿಮರ್ಶೆ ಮಾಡಲಾಗಿದೆ.

ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಾಬೀತುಪಡಿಸಲು ದೂರುದಾರರಾದ ಚಾಸಾ-1 ರವರನ್ನು ಫ್ರಾಸಾ-1 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ದಿನಾಂಕಃ

22.05.2017 ರಂದು ಮಧ್ಯಾಹ್ನ 11.30 ಗಂಟೆಗೆ ತಾನು ಮತ್ತು ತನ್ನ ಹೆಂಡತಿ ಮನೆಯಲ್ಲಿದ್ದಾಗ ಆರೋಪಿ ಜಮೀನಿನ ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮ ಮನೆಯ ಹತ್ತಿರ ಬಂದು ಕೇಸನ್ನು ವಾಪಸ್ಸು ತೆಗೆದುಕೊಳ್ಳಿ ಇಲ್ಲವಾದರೆ ಕೊಲೆ ಮಾಡುತ್ತೇನೆ ಎಂದು ಹೆದರಿಸಿದ್ದು, ತಮ್ಮ ಮನೆಯ ಮುಂಭಾಗ ಇದ್ದ ತುಳಸಿ ಕಟ್ಟೆಯನ್ನು ತೆಗೆದುಕೊಂಡು ಬಲಗೈಗೆ ಆರೋಪಿ ಹೊಡೆದಿದ್ದು, ತನ್ನ ಹೆಂಡತಿ ಮತ್ತು ಪಕ್ಕದ ಮನೆಯ ಶರತ್ ಜಗಳ ಬಿಡಿಸಿ ತನ್ನನ್ನು ಆಸ್ಪತ್ರೆಗೆ ಸೇರಿಸಿದ್ದು, ಆಸ್ಪತ್ರೆಯವರು ಪೊಲೀಸರಿಗೆ ದೂರು ಕೊಡಿ ಎಂದು ಹೇಳಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

**9.** ಫ್ರಾಸಾ-1 ರವರನ್ನು ಆರೋಪಿಯ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ, ಆರೋಪಿ ಮತ್ತು ಆರೋಪಿಯ ಅಕ್ಕ ತಂಗಿಯ ವಿರುದ್ಧ ತಾನು ಸಿವಿಲ್ ದಾವೆ ಸಲ್ಲಿಸಿಲ್ಲ ಎಂದರೆ ಸರಿ. ಆರೋಪಿಯ ತಂದೆ ಬೋರೇಗೌಡ ರಸ್ತೆ ಅಪಘಾತದಲ್ಲಿ ತೀರಿಕೊಂಡರು ಎಂದರೆ ಸರಿ. ಅದರ ವಿಮಾ ಪರಿಹಾರದ ಮೊತ್ತವನ್ನು ಆರೋಪಿಯು ಕುಟುಂಬದವರು ಪಡೆದುಕೊಂಡಿದ್ದಾರೆ ಎಂದರೆ ಸರಿ. ಜಮೀನಿನ ವಿಚಾರದಲ್ಲಿ ತನ್ನ ಮತ್ತು ಆರೋಪಿಯ ನಡುವೆ ವೈಮನಸ್ಸು ಇದೆ ಎಂದರೆ ಸರಿ. ತಮ್ಮ ಮನೆಯ ಮುಂದೆ ಸರ್ಕಾರದವರು ಚರಂಡಿ ತೆಗೆದಿದ್ದಾರೆ ಎಂದರೆ ಸರಿ. ತಮ್ಮ ಮನೆಯ ಪೂರ್ವ ದಿಕ್ಕಿಗೆ ಆರೋಪಿಯ ಮನೆ ಎಂದರೆ ಸರಿ. ಒಂದೇ ಮನೆಯಲ್ಲಿ ತಾನು ಮತ್ತು ಆರೋಪಿ ಭಾಗ ಮಾಡಿಕೊಂಡು ವಾಸವಾಗಿದ್ದೇವೆ ಎಂದರೆ ಸರಿ. ಆರೋಪಿಯ ತಾಯಿ ಅಂದರೆ ತನ್ನ ಅತ್ತಿಗೆ ತನ್ನ ವಿರುದ್ಧ ಸಿಸಿ.613/2017 ನ್ನು ದಾಖಲಿಸಿದ್ದಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ಹಜರಾಗುತ್ತಿದ್ದೇನೆ ಎಂದರೆ ಸರಿ. ಆರೋಪಿಯ ಸಹೋದರಿಯರು ಇಬ್ಬರು ಜನ ಎಂದರೆ ಸರಿ. ಆರೋಪಿಯ ಅಕ್ಕನ ಗಂಡ ಕಾರಿನಲ್ಲಿ ಆರೋಪಿಯ ಮನೆಗೆ ಬಂದಿದ್ದರು ಎಂದರೆ ತನಗೆ ಗೊತ್ತಿಲ್ಲ. ಘಟನೆ ನಡೆದಾಗ ತಮ್ಮ ಮನೆಯ ಪಶ್ಚಿಮಕ್ಕೆ ಪೇಪರ್ ಕೃಷ್ಣೇಗೌಡ ಇದ್ದರು ಎಂದು ನುಡಿದಿರುತ್ತಾರೆ.

**10.** ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಾಬೀತುಪಡಿಸಲು ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-2 ರವರನ್ನು ಫ್ರಾಸಾ-2 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ದಿನಾಂಕಃ22.05.2017 ರಂದು ತಾನು ಮತ್ತು ತನ್ನ ಗಂಡ ಮನೆಯಲ್ಲಿ ಇದ್ದು, ಆಗ ತನ್ನ ಭಾವನ ಮಗ ಜೀವನ್ ಕುಮಾರ್ ಆಸ್ತಿ ವಿಚಾರಕ್ಕೆ ಜಗಳ

ಮಾಡಿದ್ದು, ತುಳಸಿ ಪಾಟ್ ಅನ್ನು ತೆಗೆದುಕೊಂಡು ಬಂದು ತನ್ನ ಗಂಡನ ತಲೆಗೆ ಹೊಡೆಯಲು ಬಂದಿದ್ದು, ಅವರು ಬಲಗೈ ಅಡ್ಡ ಹಾಕಿದ್ದು, ಆಗ ತನ್ನ ಗಂಡನ ಕೈಗೆ ಏಟಾಗಿ ಶಸ್ತ್ರ ಚಿಕಿತ್ಸೆಯಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಮುಂದುವರೆದು ದಿನಾಂಕಃ 23.05.2017 ರಂದು ಪೊಲೀಸರು ಬೆಳಗ್ಗೆ 11.00 ರಿಂದ 11.45 ಗಂಟೆಗೆ ತಮ್ಮ ಮನೆಯ ಬಳಿ ಬಂದು ಮಹಜರ್ ಮಾಡಿಕೊಂಡು ಹೋಗಿದ್ದು, ಆಗ ಚಾ.ಸಾ-3 ಮತ್ತು 4 ನಮ್ಮ ಪಕ್ಕದ ಮನೆಯವರು ಹಾಜರಿದ್ದು, ಆಗ ತುಳಸಿ ಪಾಟ್ ನ ಹೊಡೆದು ಹೋದ ಚೂರುಗಳನ್ನು ವಶಕ್ಕೆ ಪಡೆದಿದ್ದು, ಪೊಲೀಸರಿಗೆ ಹೇಳಿಕೆ ನೀಡಿದ್ದೇನೆಂದು ಸಾಕ್ಷ್ಯ ನುಡಿದಿರುತ್ತಾರೆ.

**11.** ಫ್ರಾಸಾ-2 ರವರನ್ನು ಆರೋಪಿಯ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ, ತನ್ನ ಗಂಡನ ಒಡಹುಟ್ಟಿದವರು ಮೂರು ಗಂಡು ಮತ್ತು ಮೂರು ಹೆಣ್ಣು ಮಕ್ಕಳು. ತನ್ನ ಮಾವನಿಗೆ ಇಬ್ಬರು ಹೆಂಡತಿಯರು, ಹಿರಿಯ ಹೆಂಡತಿಗೆ ಎರಡು ಗಂಡು ಒಂದು ಹೆಣ್ಣು ಮಕ್ಕಳು. ಕಿರಿಯ ಹೆಂಡತಿಗೆ ಎರಡು ಹೆಣ್ಣು ಮತ್ತು ಒಂದು ಗುಂಡು ಮಕ್ಕಳು ಇದ್ದಾರೆ. ತನ್ನ ಗಂಡ ಹಿರಿಯ ಹೆಂಡತಿಯ ಮಗ. ತನ್ನ ಮೈದುನನ ಹೆಸರು ಕುಮಾರ. <u>ತನ್ನ ಗಂಡ ಆಸ್ತಿಗೆ ಸಂಬಂದಿಸಿದಂತೆ ಆರೋಪಿಯ ವಿರುದ್ಧ ಸಿವಿಲ್ ದಾವೆಯನ್ನು ಹೂಡಿದ್ದಾರೆ.</u> <u>ದಾವೆ ಹೂಡಿರುವ ಸ್ವತ್ತಿನ ಸರ್ವೇ ನಂಬರ್ ತನಗೆ ಗೊತ್ತಿಲ್ಲ, ದಾವೆಯ ನಂಬರ್ ಸಹ ತನಗೆ ಗೊತ್ತಿಲ್ಲ.</u> <u>ಸದರಿ ದಾವೆಯ ಪಕ್ಷಕಾರರು ತನ್ನ ಗಂಡ ಮತ್ತು ಆರೋಪಿ ಅಷ್ಟೆ.</u> ತನಗೆ ದಾವಾ ಸ್ವತ್ತಿನ ಬಗ್ಗೆಯಾಗಲೀ, ದಾವೆಯ ಬಗ್ಗೆಯಾಗಲೀ ಏನು ಗೊತ್ತಿಲ್ಲ, ಪ್ರಸ್ತುತ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. <u>ತನ್ನ ಮೈದ ಕುಮಾರನು ತನ್ನ ಗಂಡ, ಆರೋಪಿ ಮತ್ತು ಇತರೆ ಕುಟುಂಬದವರ ವಿರುದ್ಧ ವಿಭಾಗಕ್ಕಾಗಿ ದಾವೆ ಹಾಕಿದ್ದ ಎಂದರೆ ಸರಿ. ತನ್ನ ಗಂಡ ಆರೋಪಿಯ ವಿರುದ್ಧ ದಾವೆ ಸಲ್ಲಿಸಿರುವ ಬಗ್ಗೆ ಪೊಲೀಸರಿಗೆ ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ</u>ವೆಂದು ನುಡಿದಿರುತ್ತಾರೆ.

ಮುಂದುವರೆದು <u>ತನ್ನ ಭಾವ ಆರೋಪಿಯ ತಂದೆ ರಸ್ತೆ ಅಪಘಾತದಲ್ಲಿ ತೀರಿಕೊಂಡರು ಎಂದರೆ ಸರಿ. ರಸ್ತೆ ಅಪಘಾತದ ಪರಿಹಾರವನ್ನು ಆರೋಪಿ ಮತ್ತು ಆತನ ಅಕ್ಕಂದಿರು ಪಡೆದುಕೊಂಡಿದ್ದಾರೆ ಎಂದರೆ ಸರಿ.</u> ತಮ್ಮ ಮನೆಯ ಮುಂಭಾಗ ಕಾಂಕ್ರೀಟ್ ರಸ್ತೆ ಇದೆ ಎಂದರೆ ಸರಿ. ತಮ್ಮ ಮನೆಯ ಮುಂಭಾಗದಿಂದ ರಸ್ತೆಗೆ ಬರಲು ಮೆಟ್ಟಿಲುಗಳು ಇವೆ ಎಂದರೆ ಸರಿ. ತಮ್ಮ ಮನೆಯ ಅಕ್ಕ-ಪಕ್ಕ ದಿಂಡು ಕಟ್ಟಿದ್ದೇವೆ ಎಂದರೆ ಸರಿ. ಸದರಿ ದಿಂಡು ಸುಮಾರು 1½ ಅಡಿ

ಇರಬಹುದು. ತಮ್ಮ ಮನೆಯ ದಕ್ಷಿಣ ದಿಕ್ಕಿಗೆ ಆರೋಪಿಯ ಮನೆ ಇದೆ. ತಮ್ಮ ಮನೆಯ ಪೂರ್ವಕ್ಕೆ ನಿಂಗೇಗೌಡರ ಮನೆ, ಪಶ್ಚಿಮಕ್ಕೆ ದಾಸಪ್ಪನ ಮನೆ, ಉತ್ತರಕ್ಕೆ ಖಾಲಿ ಜಾಗ, ದಕ್ಷಿಣಕ್ಕೆ ಆರೋಪಿಯ ಮನೆ ಇದೆ. ತಮ್ಮ ಮತ್ತು ಆರೋಪಿಯ ಮನೆ ಮಧ್ಯ ಭಾಗದಲ್ಲಿ ಅಡ್ಡಗೋಡೆ ಹಾಕಲಾಗಿದೆ ಎಂದರೆ ಸರಿ. ತನ್ನ ಮಗನ ಹೆಸರು ಅರ್ಜುನ್. ತನ್ನ ಮಗ ಮತ್ತು ಶರತ್ ಸ್ನೇಹಿತರು ಎಂದರೆ ಸರಿ. ಸದರಿ ಶರತ್ ಪ್ರಸ್ತುತ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ ಎಂದು ನುಡಿದಿರುತ್ತಾರೆ.

ಮುಂದುವರೆದು ನಿಪಿ-2 ಮಹಜರ್ ಕಾಲಕ್ಕೆ ತನ್ನ ಜೊತೆಗೆ ಪೊಲೀಸರು, ಶರತ್ ಮತ್ತು ರಂಜಿತ್ ಇದ್ದರು. ನಿಪಿ-2 ರಲ್ಲಿ ಏನು ಬರೆದಿದ್ದಾರೆ ತನಗೆ ಗೊತ್ತಿಲ್ಲ. ತುಳಸಿ ಕಟ್ಟೆ ಇಟ್ಟ ಜಾಗದಲ್ಲಿ ಗುರುತು ಆಗಿರುತ್ತದೆ ಎಂದರೆ ಸರಿ. ಮು.ಮಾ-1 ರಲ್ಲಿ ಇದ್ದ ತುಳಸಿ ಗಿಡವನ್ನು ಮತ್ತು ಮಣ್ಣನ್ನು ತಾನೇ ಎಸೆದೆ. ಬರಿ ಪಾಟ್ ನ ಚೂರುಗಳನ್ನು ಮಾತ್ರ ಎತ್ತಿ ಇಟ್ಟಿದ್ದೆ. ತನ್ನ ಗಂಡನನ್ನು ಎನ್. ಹೆಚ್.ಆಸ್ಪತ್ರೆಗೆ ತನ್ನ ಮಗ ಮತ್ತು ಮಗಳು ಕರೆದುಕೊಂಡು ಹೋಗಿದ್ದರು. ಆರೋಪಿಯ ತಾಯಿ ಜಯಲಕ್ಷ್ಮಮ್ಮ ತನ್ನ ಗಂಡ, ತನ್ನ ಮತ್ತು ತನ್ನ ಮಕ್ಕಳ ವಿರುದ್ಧ ದೂರನ್ನು ಕೊಟ್ಟಿದ್ದಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ತಾವು ಜಾಮೀನು ಪಡೆದು ವಿಚಾರಣೆಗೆ ಹಾಜರಾಗುತ್ತಿದ್ದೇವೆ ಎಂದರೆ ಸರಿ ಎಂದು ನುಡಿದಿರುತ್ತಾರೆ.

**12.** ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಾಬೀತುಪಡಿಸಲು ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-3 ರವರನ್ನು ಫಾಸಾ-3 ಎಂದು ವಿಚಾರಣೆಗೊಳಪಡಿಸಿದ್ದು, ದಿನಾಂಕಃ22.05.2017 ರಂದು ಗವಿಸಿದ್ದೇಗೌಡರ ಮನೆಯ ಪಕ್ಕ ಲಕ್ಕೇಗೌಡರ ಮನೆಯಲ್ಲಿ ತಾನು ಮತ್ತು ತನ್ನ ತಾಯಿ ಬಾಡಿಗೆಗೆ ಇದ್ದು, ಆ ದಿನ ಜೀವನ್ ಮತ್ತು ನಾಗೇಗೌಡರ ನಡುವೆ ಗಲಾಟೆ ನಡೆಯುತ್ತಿತ್ತು, ಜನರು ತುಂಬಿದ್ದು, ತಾನು ಹೋಗಿ ನೋಡಿದ್ದು, ಜೀವನ್ ಏಕ ವಚನದಲ್ಲಿ ಬೈಯ್ಯುತ್ತಿದ್ದು, ಚಾ.ಸಾ-1 ರವರು ಯಾಕೆ ಎಂದು ಪ್ರಶ್ನಿಸಿದಾಗ, ಆರೋಪಿಯು ಪಾಟ್ ಅನ್ನು ಎತ್ತಿಕೊಂಡು ಚಾ.ಸಾ-1 ರವರ ಕೈಗೆ ಹೊಡೆದಿದ್ದು, ಅಷ್ಟರಲ್ಲಿ ಅರ್ಜುನ್ ಬಂದಿದ್ದು, ತಕ್ಷಣ ಚಾ.ಸಾ-1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಮುಂದುವರೆದು ಸುತ್ತ ಮುತ್ತಲ ಜನ ಜಗಳ ಬಿಡಿಸಿದ್ದು, ಚಾ.ಸಾ-1 ರವರು ಪೊಲೀಸರಿಗೆ ಹೇಳಿಕೆ ನೀಡಿದ್ದು, ನಿಪಿ-2 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಹಾಕಿದ್ದು, ನಾಗಣ್ಣ ರವರ ಹೇಳಿಕೆ ಪಡೆಯುವಾಗ ಪೊಲೀಸರು ಠಾಣೆಯಲ್ಲಿ ತನ್ನ ಸಹಿ ಪಡೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

**13.** ಫ್ರಾಸಾ-3 ರವರನ್ನು ಆರೋಪಿಯ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ, ನಾಗೇಗೌಡರ ಮಗ ಅರ್ಜುನ್ ತನ್ನ ಸ್ನೇಹಿತ. ನಾಗೇಗೌಡರ ಮನೆಯ ಎದುರುಗಡೆ ಹರಗಪ್ಪ ರವರ ಮನೆ ಇದೆ. ನಾಗೇಗೌಡರ ಮನೆಯ ಎಡಕ್ಕೆ ಲಕ್ಕೇಗೌಡರ ಮನೆ ಇದೆ. ನಾಗೇಗೌಡರ ಮನೆಯ ಬಲಕ್ಕೆ ಒಡ್ಡರ ಮನೆ ಇದೆ. ನಾಗೇಗೌಡರ ಮನೆಯ ಸುತ್ತಮುತ್ತ ಮನೆಗಳಲ್ಲಿ ಜನರು ವಾಸವಾಗಿದ್ದಾರೆ ಎಂದರೆ ಸರಿ. ನಾನು ಬೆಂಗಳೂರಿನಲ್ಲಿ ಸಮಾರು 8-10 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಕೃತ್ಯ ನಡೆಯಿತು ಎನ್ನುವ ಸಮಯಕ್ಕೆ ತಾನು ನಾಗೇಗೌಡರ ಮನೆಯ ಪಕ್ಕದಲ್ಲಿ ಬಾಡಿಗೆಗೆ ವಾವವಿದ್ದೆವು. ತಾನು ಲಕ್ಕೇಗೌಡರ ಮನೆಯ ಪಕ್ಕದಲ್ಲಿ ಬಾಡಿಗೆಗೆ ಇದ್ದೆ. <u>ಚಾ.ಸಾ-1 ಮತ್ತು ಆರೋಪಿಯ ನಡುವೆ ಏನು ವಿವಾದ ಇದೆ ಎಂದು ತನಗೆ ಗೊತ್ತಿಲ್ಲ.</u> ಘಟನೆ ನಡೆಯಿತು ಎನ್ನುವ ಸಮಯಕ್ಕೆ ಸುತ್ತ ಮುತ್ತಲ, ಅಕ್ಕಪಕ್ಕದ ಮನೆಯವರು ಹಾಜರಿದ್ದರು, ಅವರುಗಳೆಂದ ಜಯಲಕ್ಷ್ಮಮ್ಮ, ಲಕ್ಕೇಗೌಡ, ರಾಮಯ್ಯರವರ ಮಗ ವಾರಣ್ಣ, ರಾಜೇಶ್, ರಾಜೇಶ್ ರವರ ಹೆಂಡತಿ ಮತ್ತು ತಾಯಿ, ವಡ್ಡರ ಮನೆಯವರು ಇದ್ದರು. ಸಾಕ್ಷಿಯು ನಾಗೇಗೌಡರ ಮನೆಯ ಎಡಕ್ಕೆ ಒಬ್ಬ ಜಯಲಕ್ಷ್ಮಮ್ಮ ರವರು ಇದ್ದಾರೆ ಎಂದು ನುಡಿಯುತ್ತಾರೆ. <u>ಆರೋಪಿಯ ತಾಯಿಯ ಮೇಲೆ ಚಾ.ಸಾ-1 ಮತ್ತು 2 ಹಾಗೂ ಅವರ ಮಗ ಹಲ್ಲೆ ಮಾಡಿದ್ದಾರೆ ಎಂದರೆ ತನಗೆ ಗೊತ್ತಿಲ್ಲ. ಆರೋಪಿಯ ತಾಯಿಯು ಅವರುಗಳ ವಿರುದ್ಧ ದೂರು ಕೊಟ್ಟಿದ್ದಾರೆ ಎಂದರೆ ತನಗೆ ಗೊತ್ತಿಲ್ಲ.</u> <u>ಘಟನೆ ನಡೆಯಿತು ಎನ್ನುವ ದಿನ ಯಾವ ವಾರವಾಗಿತ್ತು ಎಂದು ತನಗೆ ನೆನಪಿಲ್ಲ.</u> ಮು.ಮಾ-1 ರ ಮೇಲೆ ತಾನು ಯಾವುದೇ ವಿಷೇಶ ಗುರುತನ್ನು ಇಟ್ಟುಕೊಂಡಿಲ್ಲ. <u>ಸದರಿ ಪಾಟ್ ಮು.ಮಾ-1 ತರ ಇತ್ತೋ ಇಲ್ಲವೋ ತನಗೆ ಗೊತ್ತಿಲ್ಲ.</u> <u>ಜೀವನ್ ತಂದೆ ರಸ್ತೆ ಅಪಘಾತದದಲ್ಲಿ ತೀರಿಕೊಂಡಿದ್ದು, ಪರಿಹಾರದ ಮೊತ್ತವನ್ನು ಚಾ.ಸಾ-1 ರವರಿಗೆ ಕೊಡಲಿಲ್ಲ ಎಂಬ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲಿಸಿದ್ದಾರೆ ಎಂದರೆ ತನಗೆ ಗೊತ್ತಿಲ್ಲವೆಂದು</u> ನುಡಿದಿರುತ್ತಾರೆ.

**14.** ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಾಬೀತುಪಡಿಸಲು ಪ್ರಕರಣದ ಸ್ಥಳ ಪಂಚನಾಮೆ ಸಾಕ್ಷಿದಾರರಾದ ಚಾಸಾ-4 ರವರನ್ನು ಫ್ರಾಸಾ-6 ಎಂದು ವಿಚಾರಣೆಗೊಳಪಡಿಸಿದ್ದು, ಆರೋಪಿ ತನಗೆ ಗೊತ್ತು. ಚಾ.ಸಾ-1 ಮತ್ತು 2 ತಮ್ಮ ಮನೆಯ ಪಕ್ಕದವರು. ಚಾ.ಸಾ-3 ತಮ್ಮ ಮನೆಯ ಪಕ್ಕದಲ್ಲೆ ಬಾಡಿಗೆಗೆ ಇದ್ದರು. ನಿಪಿ-2 ಮಹಜರ್ ಗೆ ಪೊಲೀಸ್ ಠಾಣೆಯಲ್ಲಿ 2018 ರಲ್ಲಿ ಸಹಿ ಹಾಕಿರುತ್ತೇನೆ. ಅದರಲ್ಲಿರುವ ಅಂಶಗಳು ಗೊತ್ತಿಲ್ಲವೆಂದು ಸಾಕ್ಷ್ಯ ನುಡಿದ ಪರಿಣಾಮ,

ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀ ಸವಾಲಿನಲ್ಲಿ, ನಿಪಿ-2 ರಲ್ಲಿರುವ ಎಲ್ಲಾ ವಿಚಾರಗಳನ್ನು ಅಲ್ಲೆಗಳೆದಿರುತ್ತಾರೆ.

**15.** ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಾಬೀತುಪಡಿಸಲು ವೈಧ್ಯಾಧಿಕಾರಿಗಳಾದ ಚಾಸಾ-6 ರವರನ್ನು ಫ್ರಾಸಾ-4 ಎಂದು ವಿಚಾರಣೆಗೊಳಪಡಿಸಿದ್ದು, ದಿನಾಂಕಃ 23.05.2017 ರಂದು ಬೆಳಗ್ಗೆ 10.00 ರ ಸಮಯದಲ್ಲಿ, ಚಾ.ಸಾ-1 ರವರನ್ನು ಅವರ ಸಂಬಂದಿಕರಾದ ಆರ್ಜುನ್ ಎಂಬುವವರು ಹಲ್ಲೆಯ ಹಿನ್ನೆಲೆಯಲ್ಲಿ ಗಾಯಗೊಂಡು ಚಿಕಿತ್ಸೆಗಾಗಿ ಬಂದಿದ್ದು, ಅವರನ್ನು ಕ್ಷ-ಕಿರಣ ಮಾಡಿಸಿ ನೋಡಿದಾಗ ಮುಂತೋಳಿನ ರೇರಿಯಸ್ ಮೂಳೆಯು ಮುರಿದಿದ್ದು, ಅವರನ್ನು ಒಳರೋಗಿಯಾಗಿ ದಾಖಲಿಸಿದ್ದು, ಅವರು ಮೂಳೆ ತಜ್ಞರು ಶಸ್ತ್ರ ಚಿಕಿತ್ಸೆಗೆ ಒಳಪಡಿಸಿದ್ದು, ಈ ಬಗ್ಗೆ ತಾನು ಪಾಂಡವಪುರ ಪೊಲೀಸರಿಗೆ ಗಾಯದ ಪ್ರಮಾಣ ಪತ್ರವನ್ನು ನೀಡಿರುವುದಾಗಿ ಸಾಕ್ಷ್ಯನುಡಿದಿರುತ್ತಾರೆ.

**16.** ಫ್ರಾಸಾ-4 ರವರನ್ನು ಆರೋಪಿಯ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ, <u>ಮೊದಲನೇ ಗಾಯವು ಒಂದು ದಿನದ ಹಳೆಯದ್ದೆಂದು ನಮೂದಿಸಿದ್ದೇನೆ ಎಂದರೆ ಸರಿ. ಗಾಯಾಳುವು ಈ ಮೊದಲು ಪ್ರಥಮ ಚಿಕಿತ್ಸೆಯನ್ನು ಯಾವುದೋ ಆಸ್ಪತ್ರೆಯಲ್ಲಿ ಪಡೆದಿರುವ ಬಗ್ಗೆ ಹೇಳಿದರು, ಆದರೆ ಆಸ್ಪತ್ರೆಯ ಹೆಸರನ್ನು ಹೇಳಲಿಲ್ಲ. ತಾನು ಗಾಯಾಳುವಿಗೆ ಚಿಕಿತ್ಸೆ ಕೊಡುವ ಮೊದಲು ಪೊಲೀಸರಿಗೆ ಮಾಹಿತಿ ನೀಡಿಲ್ಲ.</u> <u>2 ನೇ ಗಾಯ ದಿನಾಂಕಃ 27.05.2017 ರಂದೆ ಆಗಿರುತ್ತದೆ. ಅದನ್ನು ತಾನು ನಿಪಿ-3 ರಲ್ಲಿ ನಮೂದಿಸಿಲ್ಲ.</u> ಒಬ್ಬ ವ್ಯಕ್ತಿ ಸಾಮಾನ್ಯವಾಗಿ ನಡೆದುಕೊಂಡು ಹೋಗುವಾಗ ಸಿಮೆಂಟ್ ಚರಂಡಿಗೆ ಜಾರಿ ಬಿದ್ದು, ಮುಖ ಮತ್ತು ಕೈಗೆ ಏಟಾದರೆ ಗಾಯ ನಂ-1 ಮತ್ತು 2 ಆಗಬಹುದು ಎಂದು ನುಡಿದಿರುತ್ತಾರೆ.

**17.** ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಾಬೀತುಪಡಿಸಲು ತನಿಖಾಧಿಕಾರಿಯಾದ ಚಾಸಾ-7 ರವರನ್ನು ಫ್ರಾಸಾ-5 ಎಂದು ವಿಚಾರಣೆಗೊಳಪಡಿಸಿದ್ದು, ದಿನಾಂಕಃ 22.05.2017 ರಂದು ಠಾಣಾ ಕರ್ತವ್ಯದಲ್ಲಿರುವಾಗ ಸಂಜೆ 6.15 ಕ್ಕೆ ಚಾ.ಸಾ-1 ರವರು ತನ್ನ ಮುಂದೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು, ಠಾಣಾ ಮೊ.ಸಂಖ್ಯೆ

174/2017 ರಲ್ಲಿ ಪ್ರಕರಣವನ್ನು ದಾಖಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಮುಂದುವರೆದು ಮಾರನೇ ದಿನ ಬೆಳಗ್ಗೆ 11.00 ರಿಂದ 11.45 ರ ಸಮಯದವರೆಗೆ ಚಾ.ಸಾ-2 ರವರು ತೋರಿಸಿದ ಕೃತ್ಯ ಸ್ಥಳದಲ್ಲಿ ಚಾ.ಸಾ-3 ಮತ್ತು 4 ರವರ ಸಮಕ್ಷಮ ಕೃತ್ಯ ಸ್ಥಳ ಪಂಚನಾಮ ಕ್ರಮ ಕೈಗೊಂಡು ಸಿಮೆಂಟ್ ಪಾಟ್ ಹೊಡೆದು ಹೋಗಿದ್ದು, ಅದರ ಚೂರುಗಳನ್ನು ವಶಪಡಿಸಿಕೊಂಡು, ಸ್ಥಳದಲ್ಲಿ ಪಂಚರುದಾರರ ಸಹಿ ಪಡೆದಿದ್ದು, ನಂತರ ಠಾಣೆಗೆ ಬಂದು ಪಿ.ಎಫ್.ವರದಿಯಲ್ಲಿ ನಮೂದಿಸಿದ್ದು, ಅದೇ ದಿನ ಸಾಕ್ಷಿದಾರರಾದ ಚಾ.ಸಾ-2 ಮತ್ತು 3 ರವರ ಹೇಳಿಕೆಗಳನ್ನು ಪಡೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಮುಂದುವರೆದು ದಿನಾಂಕಃ12.06.2017 ರಂದು ಚಾ.ಸಾ-1 ರವರ ಗಾಯ ಪ್ರಮಾಣ ಪತ್ರವನ್ನು ಮೈಸೂರಿನ ನಾರಾಯಣ ಹೃದಯಾಲಯ ಆಸ್ಪತ್ರೆಯಿಂದ ಪಡೆದಿದ್ದು, ಅದೇ ದಿನ ಡಿಸ್ಚಾರ್ಜ್ ಸಮ್ಮರಿ ಮತ್ತು ಎರಡು ಎಕ್ಸ್ ರೇ ಪಿಲಿಮ್ ಗಳನ್ನು ಪಡೆದುಕೊಂಡಿದ್ದು, ತನಿಖೆ ಪೂರ್ಣಗೊಂಡಿದ್ದು, ಆರೋಪಿಯ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

**18.** ಫ್ರಾಸಾ-5 ರವರನ್ನು ಆರೋಪಿಯ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ, ನಿಪಿ-1 ದೂರಿನಲ್ಲಿ ದೂರುದಾರರು ಮನೆಯ ಮುಂಭಾಗದ ರಸ್ತೆಯಲ್ಲಿ ಗಲಾಟೆಯಾಯಿತು ಎಂದು ಹೇಳಿಲ್ಲ. ನಿಪಿ-3 ರಲ್ಲಿ ನಮೂದಿಸಿರುವ ಅರ್ಜುನ್ ಎಂಬುವವರನ್ನು ತಾನು ವಿಚಾರಿಸಲಿಲ್ಲ. ಪಿರ್ಯಾದುದಾರರು ಪಾಂಡವಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ತಾನು ದಾಖಲೆ ಕಲೆ ಹಾಕಿಲ್ಲ. ಆಸ್ತಿಗೆ ಸಂಬಂದಿಸಿದಂತೆ ಯಾವುದೇ ದಾಖಲೆಗಳನ್ನು ತಾನು ಕಲೆ ಹಾಕಿಲ್ಲ. ಚಾ.ಸಾ-3 ಮತ್ತು 4 ರವರು ಪಿರ್ಯಾದುದಾರರ ಬಾಜುದಾರರಲ್ಲ. ತಾನು ಪಂಚರಿಗೆ ಲಿಖಿತ ನೋಟೀಸ್ ಕೊಟ್ಟಿಲ್ಲ. ತಾನು ಸ್ಥಳಕ್ಕೆ ಬೇಟಿ ನೀಡಿದಾಗ ಪಾಟ್ ಇದ್ದ ಜಾಗವನ್ನು ಪರಿಶೀಲಿಸಲಿಲ್ಲ, ಅಲ್ಲಿ ಪಾಟ್ ಇದ್ದ ಬಗ್ಗೆ ಕುರುಹು ಇರಲಿಲ್ಲ. ಆರೋಪಿ ಮತ್ತು ಚಾ.ಸಾ-1 ರವರ ನಡುವೆ ಸಿವಿಲ್ ವ್ಯಾಜ್ಯ ನಡೆಯುತ್ತಿದೆ ಎಂದರೆ ತನಗೆ ಗೊತ್ತಿಲ್ಲ. ತಾನು ಆ ಬಗ್ಗೆ ಯಾವುದೇ ದಾಖಲೆಗಳನ್ನು ಪಡೆದುಕೊಳ್ಳಲಿಲ್ಲ ಎಂದು ನುಡಿದಿರುತ್ತಾರೆ. ಉಳಿದಂತೆ ಸೂಚಿಸಿದ ಪ್ರಶ್ನೆಗಳನ್ನು ಅಲ್ಲಗಳೆದಿರುತ್ತಾರೆ.

**19.** ಅಭಿಯೋಜನೆಯು ತನ್ನ ಪ್ರಕರಣದಂತೆ, ಆರೋಪಿಯ ವಿರುದ್ಧ ಹೊರಿಸಿರುವ ಆರೋಪವನ್ನು ರುಜುವಾತುಪಡಿಸುವ ಹೊಣೆಗಾರಿಕೆ ಅಭಿಯೋಜನೆಯ ಮೇಲೆ ಇರುತ್ತದೆ.

**20.** ಪ್ರಸ್ತುತ ಪ್ರಕರಣದಲ್ಲಿ ಫಿರ್ಯಾದುದಾರರಾದ ಹಾಗೂ ಗಾಯಾಳುದಾರರಾದ ಫ್ರಾಸಾ-1 ರವರು ನ್ಯಾಯಾಲಯದಲ್ಲಿ ಆರೋಪಿ ಜಮೀನಿಗೆ ಸಂಬಂಧಿಸಿದಂತೆ ಗಲಾಟೆ ಮಾಡಿ ತುಳಸಿ ಕಟ್ಟೆಯನ್ನು ತನ್ನ ಬಲಗೈಗೆ ಹೊಡೆದನೆಂದು ಆರೋಪಿಸಿ, ಸಾಕ್ಷ್ಯವನ್ನು ನುಡಿದಿದ್ದು, ಸದರಿ ಅಂಶಕ್ಕೆ ಪೂರಕವಾಗಿ ಫ್ರಾಸಾ-2 ರವರು ಪ್ರತ್ಯಕ್ಷ ಸಾಕ್ಷಿದಾರರೆಂದು ವಿಚಾರಣೆಗೆ ಒಳಪಟ್ಟಿದ್ದು, ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತುಳಚಿಪಾಟ್ ಅನ್ನು ಆರೋಪಿ ತನ್ನ ಗಂಡನ ತಲೆಗೆ ಹೊಡೆಯಲು ಹೋದಾಗ, ಅವರ ಬಲಗೈ ಅಡ್ಡ ಪಡಿಸಿದ್ದು, ಆಗ ತನ್ನ ಗಂಡನ ಕೈಗೆ ಏಟಾಗಿದೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಅದೇ ರೀತಿ ಫ್ರಾಸಾ-3 ರವರನ್ನು ಸಹ ಪ್ರತ್ಯಕ್ಷ ಸಾಕ್ಷಿದಾರರೆಂದು ವಿಚಾರಣೆಗೆ ಒಳಪಟ್ಟಿದ್ದು, ಅವರು ಆರೋಪಿಯು ಪಾಟ್ ಅನ್ನು ಎತ್ತಿಕೊಂಡು ಚಾಸಾ-1 ರವರ ಕೈಗೆ ಹೊಡೆದರು ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

**21.** ಫ್ರಾಸಾ-1 ರಿಂದ 3 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ, ಆರೋಪಿ ಮತ್ತು ಫ್ರಾಸಾ-1 ಮತ್ತು 2 ರವರ ನಡುವೆ ಜಮೀನಿಗೆ ಸಂಬಂಧಿಸಿದಂತೆ ಈಗಾಗಲೇ ಸಿವಿಲ್ ಪ್ರಕರಣಗಳು ನಡೆಯುತ್ತಿರುವ ಬಗ್ಗೆ ನ್ಯಾಯಾಲಯದಲ್ಲಿ ಒಪ್ಪಿಕೊಂಡಿರುತ್ತಾರೆ.

**22.** ಫ್ರಾಸಾ-3 ರವರು ಫ್ರಾಸಾ-1 ಮತ್ತು 2 ರವರ ಮಗ ಅರ್ಜುನ್ ರವರ ಸ್ನೇಹಿತರಾಗಿರುತ್ತಾರೆ. ಅವರನ್ನು ಹೊರತುಪಡಿಸಿ, ಸ್ಥಳದಲ್ಲಿ ಸಾಕಷ್ಟು ಜನರು ಅಕ್ಕ-ಪಕ್ಕದ ವಾಸಿಗಳು ಇದ್ದರೂ ಸಹ ಯಾರನ್ನು ನ್ಯಾಯಾಲಯದಲ್ಲಿ ಸಾಕ್ಷಿದಾರನ್ನಾಗಿ ಮಾಡಿ ವಿಚಾರಣೆಗೆ ಒಳಪಡಿಸಿಕೊಂಡಿಲ್ಲ. ಅಭಿಯೋಜನೆಯು ಕೇವಲ ಶರತ್ ಹೊರತುಪಡಿಸಿ, ಇತರೆ ಅಕ್ಕ-ಪಕ್ಕದ ವಾಸಿಗಳ ಹೇಳಿಕೆಗಳನ್ನು ಪಡೆದುಕೊಂಡ ಬಗ್ಗೆ ದಾಖಲೆಗಳನ್ನು ಒದಗಿಸಿಲ್ಲ. ಆರೋಪಿಯು ಫ್ರಾಸಾ-1 ರವರನ್ನು ಕೊಲೆ ಮಾಡಿ, ಸಾಯಿಸುವುದಾಗಿ, ಅವಾಚ್ಯ ಶಬ್ದಗಳಿಂದ ಬೈದು, ಹಲ್ಲೆ ಮಾಡಿದ ಬಗ್ಗೆ ಸದರಿ ಹಾರೋಹಳ್ಳಿ ಗ್ರಾಮದ ಅಕ್ಕ-ಪಕ್ಕದ ವಾಸಿಗಳು ಮತ್ತು ಊರಿನ ಮುಖಂಡರು ಯಾವುದೇ ಸಾಕ್ಷ್ಯವನ್ನು ಒದಗಿಸಿಲ್ಲ.

**23.** ಘಟನೆಯು ದಿನಾಂಕಃ 22.05.2017 ರಂದು ಮಧ್ಯಾಹ್ನ 12.30 ಗಂಟೆಗೆ ಫ್ರಾಸಾ-1 ಮತ್ತು 2 ರವರು ಮನೆಯಲ್ಲಿದ್ದಾಗ ನಡೆಯಿತ್ತೆಂದು ಆರೋಪಿಸಿದ್ದು, ನಿಪಿ-1

ದೂರನ್ನು ಗಮನಿಸಿದಾಗ, ದಿನಾಂಕಃ 22.05.2017 ರಂದು ಬೆಳಿಗ್ಗೆ 11.30 ಗಂಟೆಗೆ ನಾನು ಮತ್ತು ನನ್ನ ಹೆಂಡತಿ ಮನೆಯ ಹೊರಭಾಗ ನಿಂತಿದ್ದೆವು. ಆಗ ಪಕ್ಕದ ಮನೆಯ ನನ್ನ ಅಣ್ಣನ ಮಗನಾದ ಜೀವನ್ ಕುಮಾರ್ ನಮ್ಮನ್ನು ಉದ್ದೇಶಿಸಿ, ಅವಾಚ್ಯವಾಗಿ ಬೈದು, ಅದನ್ನು ಪ್ರಶ್ನಿಸಿದ್ದಕ್ಕೆ ಕೈಯಿಂದ ಮುಖದ ಹತ್ತಿರ ಪರಚಿ, ನಮ್ಮ ಮನೆಯ ಮುಂದೆ ಇದ್ದ ತುಳಸಿ ಪಾಟ್ ಅನ್ನು ಎತ್ತಿಕೊಂಡು ನಮ್ಮ ಬಲಗೈಗೆ ಬಲವಾಗಿ ಹೊಡೆದ ಎಂದು ನಮೂದಿಸಿದ್ದು, ಫ್ರಾಸಾ-1 ರವರು ತಮಗೆ ಆರೋಪಿ ಮುಖಕ್ಕೆ ಪರಚಿದ ಬಗ್ಗೆ ಯಾವುದೇ ಸಾಕ್ಷ್ಯವನ್ನು ನುಡಿದಿಲ್ಲ. ಅದೇ ರೀತಿ ಫ್ರಾಸಾ-2 ರವರು ತನ್ನ ಗಂಡನಿಗೆ ಆರೋಪಿ ಮುಖಕ್ಕೆ ಪರಚಿದ ಬಗ್ಗೆ ಸಾಕ್ಷ್ಯವನ್ನು ನುಡಿದಿಲ್ಲ. ಅದೇ ರೀತಿ ತಾವು ಮನೆಯ ಹೊರಗೆ ನಿಂತಿದ್ದ ಬಗ್ಗೆ ಸಾಕ್ಷ್ಯವನ್ನು ನುಡಿದಿಲ್ಲ. ಫ್ರಾಸಾ-2 ಮತ್ತು 3 ರವರು ಜಗಳವನ್ನು ಬಿಡಿಸಿದರು ಎಂದು ನಿಪಿ-1 ರಲ್ಲಿ ನಮೂದಿಸಿದ್ದು, ಉಳಿದಂತೆ ಸದರಿ ಸಮಯದಲ್ಲಿ ಬೇರೆ ಇತರರು ಹಾಜರಿದ್ದ ಬಗ್ಗೆ ಕಂಡು ಬಂದಿಲ್ಲ. ಹೀಗಿರುವಾಗ ಕೇವಲ ಫ್ರಾಸಾ-1 ರವರ ದೂರಿನ ಆಧಾರದ ಮೇಲೆ ಫ್ರಾಸಾ-5 ರವರು ಪ್ರಕರಣವನ್ನು ದಾಖಲಿಸಿದ್ದು, ಯಾವುದೇ ಪ್ರಾಥಮಿಕ ತನಿಖೆಯನ್ನು ನಡೆಸಿಲ್ಲವೆಂದು ತಿಳಿದು ಬರುತ್ತದೆ. ಆರೋಪಿಯು ಮನೆಯ ಮುಂದಿದ್ದ ಪಾಟ್ ತೆಗೆದು ಫ್ರಾಸಾ-1 ರವರಿಗೆ ಹಲ್ಲೆ ನಡೆಸಿದ್ದಲ್ಲಿ, ಅಕ್ಕ-ಪಕ್ಕದ ವಾಸಿಗಳು ಸದರಿ ಗಲಾಟೆಯನ್ನು ನೋಡಿ ತಡೆಯಲು ಬರುತ್ತಿದ್ದರು ಅಥವಾ ನ್ಯಾಯಾಲಯದಲ್ಲಿ ಸಾಕ್ಷಿದಾರರಾಗಿ ವಿಚಾರಣೆಗೆ ಒಳಪಡುತ್ತಿದ್ದರು. ಆದರೆ ಪ್ರಸ್ತುತ ಪ್ರಕರಣದಲ್ಲಿ ಫ್ರಾಸಾ-3 ರವರನ್ನು ಹೊರತುಪಡಿಸಿ, ಯಾವುದೇ ಗ್ರಾಮಸ್ಥರು ಸಾಕ್ಷಿದಾರರಾಗಿರದ ಅಂಶವನ್ನು ಗಮನಿಸಿದ್ದಲ್ಲಿ, ಪ್ರಸ್ತುತ ಪ್ರಕರಣವನ್ನು ಆರೋಪಿಯ ವಿರುದ್ಧ ಸುಳ್ಳಾಗಿ ದಾಖಲಿಸಲಾಗಿದೆ ಎಂಬುದು ತಿಳಿದು ಬರುತ್ತದೆ.

**24.** ನಿಪಿ-2 ಪಂಚನಾಮೆಯನ್ನು ಗಮನಿಸಿದಾಗ, ಅದು ಫ್ರಾಸಾ-1 ರವರ ಮನೆಯ ಮುಂಭಾಗದ ಠಾರ್ ರಸ್ತೆಯಲ್ಲಿ ಜರುಗಿಸಿದ ಮಹಜರ್ ಕ್ರಮವಾಗಿದ್ದು, ಸ್ಥಳದ ಚೆಕ್ಕುಬಂದಿಃ ಪೂರ್ವ-ಪಶ್ಚಿಮಕ್ಕೆಃ ಗ್ರಾಮದ ರಸ್ತೆ, ಉತ್ತರಕ್ಕೆಃ ನಾಗೇಗೌಡರ ವಾಸದ ಮನೆ, ದಕ್ಷಿಣಕ್ಕೆಃ ಹರಗಪ್ಪ ರವರ ಮನೆ ಎಂದು ನಮೂದಿಸಿದ್ದು, ಅಕ್ಕ-ಪಕ್ಕದ ವಾಸಿಗಳ ಸಹಿ ನಿಪಿ-2 ರಲ್ಲಿ ಕಂಡು ಬಂದಿಲ್ಲ. ಸದರಿ ಸ್ಥಳವನ್ನು ಫ್ರಾಸಾ-2 ರವರು ತೋರಿಸಿದರು ಎಂದು ನಮೂದಿಸಿದ್ದು, ನಿಪಿ-2 ರಲ್ಲಿ ತುಳಸಿ ಪಾಟ್ ಇದ್ದ ಬಗ್ಗೆ ಯಾವ ದಿಕ್ಕಿನಲ್ಲೂ ನಮೂದಿಸಿಲ್ಲ. ಫ್ರಾಸಾ-1 ರವರ ಮನೆಯ ಮುಂಭಾಗ ತುಳಸಿ ಕಟ್ಟೆ ಇದ್ದು, ಸಿಮೆಂಟ್ ಪಾಟ್ ತೆಗೆದುಕೊಂಡು ಆರೋಪಿ ಹಲ್ಲೆ ಮಾಡಿದ್ದಾನೆಂದು ಸದರಿ

ಸಿಮೆಂಟ್ ಪಾಟ್ ನ ಜಾಗವನ್ನು ಪ್ರಾಸಾ-2 ರವರು ತೋರಿಸಿಲ್ಲ. ಅದನ್ನು ನೀಪಿ-2 ರಲ್ಲಿ ನಮೂದಿಸಿಲ್ಲ. ಹೀಗಿರುವಾಗ ನಿಪಿ-2 ಅನ್ನು ಈ ಪ್ರಕರಣಕ್ಕಾಗಿ ಬರವಣಿಗೆ ಮಾಡಲಾಗಿದೆ ಎಂದು ತಿಳಿದು ಬರುತ್ತದೆ. ನಿಪಿ-2 ರಲ್ಲಿ ದಕ್ಷಿಣಕ್ಕೆ ಇರುವ ಹರಗಪ್ಪ ರವರ ಸಹಿಯನ್ನು ಪಡೆದಿಲ್ಲ. ನಿಪಿ-2 ಠಾರ್ ರಸ್ತೆಯಲ್ಲಿ ಜರುಗಿಸಿದ ಮಹಜರ್ ಆಗಿದೆ. ಆದರೆ ಆರೋಪಿಯು ಪ್ರಾಸಾ-1 ಮತ್ತು 2 ರವರು ಮನೆಯ ಬಳಿ ಇದ್ದಾಗ, ಗಲಾಟೆ ಮಾಡಿದರು ಎಂದು ನಮೂದಿಸಿದ್ದು, ಸದರಿ ಮನೆಯ ಜಾಗದಲ್ಲಿ ಯಾವುದೇ ಮಹಜರ್ ಅನ್ನು ಜರುಗಿಸಿಲ್ಲ.

**25.** ಪ್ರಾಸಾ-1 ರವರನ್ನು ಪ್ರಾಸಾ-3 ರವರು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ಸಾಕ್ಷ್ಯವನ್ನು ನುಡಿದಿದ್ದು, ನಿಪಿ-3 ಗಾಯ ಪ್ರಮಾಣ ಪತ್ರವಾಗಿದ್ದು, ಅದರಲ್ಲಿ ಪ್ರಾಸಾ-3 ರವರು ಆಸ್ಪತ್ರೆಗೆ ಸೇರಿಸಿದ್ದ ಬಗ್ಗೆ ನಮೂದು ಇಲ್ಲ. ನಿಪಿ-3 ರಲ್ಲಿ brought by relative Arjun ಎಂದು ನಮೂದಿಸಿದ್ದು, ಸದರಿ ಅರ್ಜುನ ಪ್ರಾಸಾ-1 ಮತ್ತು 2 ರವರ ಮಗನಾಗಿದ್ದು, ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಟ್ಟಿಲ್ಲ. ಪ್ರಾಸಾ-3 ರವರು ಹೇಳುವಂತೆ ಗಲಾಟೆ ಸಮಯಕ್ಕೆ ಅರ್ಜುನ ಬಂದು ತಕ್ಷಣ ಚಾಸಾ-1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ. ಸುತ್ತ-ಮುತ್ತಲಿನ ಜನ ಜಗಳ ಬಿಡಿಸಿದರು ಎಂದು ಹೇಳಿದ್ದು,ಪ್ರಾಸಾ-1 ಮತ್ತು 2 ರವರ ಮಗ ಅರ್ಜುನ ಘಟನೆಯನ್ನು ಕಣ್ಣಾರೆ ಕಂಡಿದ್ದರೂ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಟ್ಟಿಲ್ಲ. ಈ ಅಂಶಗಳಿಂದ ಅಭಿಯೋಜನೆಯ ಪ್ರಕರಣವು ಸುಳ್ಳಿನಿಂದ ಕೂಡಿದ್ದು, ಸೃಷ್ಠಿತ ಸಂಗತಿಯೆಂದು ತಿಳಿದು ಬರುತ್ತದೆ.

**26.** ಪ್ರಾಸಾ-4 ರವರು ಪ್ರಾಸಾ-1 ರವರನ್ನು ಪರೀಕ್ಷೆ ನಡೆಸಿ, ಗಾಯ ಪ್ರಮಾಣ ಪತ್ರವನ್ನು ನೀಡಿದ್ದರೂ ಸಹ ಪ್ರಾಸಾ-1 ರವರ ಮುಖದ ಬಲಭಾಗದಲ್ಲಿ ತರಚಿದ ಗಾಯ, ಬಲಮುಂದೋಳಿನಲ್ಲಿ ಊತ ಮತ್ತು ನೋವು ಎಂದು ನಮೂದಿಸಿದ್ದು, ಡಿ.ಆರ್.ಎಂ ಮಲ್ಟಿ ಸ್ಪಷಾಲಿಟಿ ಆಸ್ಪತ್ರೆಯಲ್ಲಿ ಮೂಳೆ ತಜ್ಞರು ಶ್ರಸ್ತ ಚಿಕಿತ್ಸೆಗೆ ಒಳಪಡಿಸಿರುತ್ತಾರೆಂದು ನಿಪಿ-3 ರಲ್ಲಿ ನಮೂದಿಸಿದ್ದು, ಸದರಿ ಮೂಳೆ ತಜ್ಞರ ವರದಿಗಳು ನ್ಯಾಯಾಲಯದಲ್ಲಿ ಲಭ್ಯವಿಲ್ಲ. ಪ್ರಾಸಾ-1 ರವರು ತಮಗೆ ಆರೋಪಿಯು ಬಲಗೈಗೆ ಪಾಟ್ ನಿಂದ ಹೊಡೆದ ಎಂದು ಸಾಕ್ಷ್ಯವನ್ನು ನುಡಿದಿದ್ದು, ಸದರಿ ಪಾಟ್ ನಿಂದ ಪ್ರಾಸಾ-1 ರವರಿಗೆ ಹಲ್ಲೆ ಮಾಡಿದ್ದರೆ, ನಿಪಿ-3 ರ ಗಾಯಗಳು ಆಗುತ್ತವೋ ಇಲ್ಲವೋ ಎಂದು ತನಿಖಾಧಿಕಾರಿಯು ವೈದ್ಯರ ಅಭಿಪ್ರಾಯವನ್ನು ಕೋರಿಲ್ಲ. ಈ

ಅಂಶಗಳಿಂದ ಆರೋಪಿಯೇ ತುಳಸಿಕಟ್ಟೆ ಪಾಟ್ ಅನ್ನು ಫ್ರಾಸಾ-1 ರವರ ಬಲಗೈಗೆ ಹೊಡೆದು ಹಲ್ಲೆ ಮಾಡಿದರು ಎಂದು ನಂಬಲಾಗುವುದಿಲ್ಲ.

**27.** ಮಹಜರ್ ಸಾಕ್ಷಿದಾರರಾದ ಫ್ರಾಸಾ-6 ರವರು ನ್ಯಾಯಾಲಯದಲ್ಲಿ ಹಾಜರಾಗಿ ವಿಚಾರಣೆಗೆ ಒಳಪಟ್ಟಿದ್ದು, ಅವರು ನಿಪಿ-2 ಕ್ಕೆ ಸಹಿ ಹಾಕಿರುವ ಬಗ್ಗೆ ಒಪ್ಪಿಕೊಂಡಿದ್ದು, ಆದರೆ ನಿಪಿ-2 ಮಹಜರ್ ನಲ್ಲಿ ಬರೆದಿರುವ ವಿಷಯ ಗೊತ್ತಿಲ್ಲವೆಂದು ಒಪ್ಪಿಕೊಂಡಿರುತ್ತಾರೆ. ಅವರು ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸಿಲ್ಲ. ಅವರನ್ನು ಪಾಟೀ ಸವಾಲಿಗೆ ಒಳಪಡಿಸಿದರೂ ಸಹ ಅಭಿಯೋಜನೆಯವರು ಯಾವುದೇ ಗಮನಾರ್ಹವಾದ ಅಂಶಗಳನ್ನು ಹೊರತಂದಿರುವುದಿಲ್ಲ. ನಿಪಿ-2 ರ ಅಂಶ ಮತ್ತು ಫ್ರಾಸಾ-6 ರವರ ಹೇಳಿಕೆಗಳಲ್ಲಿ ವ್ಯತಿರಿಕ್ತತೆ ಇದ್ದು, ಫ್ರಾಸಾ-5 ರವರು ಸ್ಥಳದಲ್ಲಿ ನಿಪಿ-2 ರಂತೆ ಮಹಜರ್ ಕ್ರಮ ಜರುಗಿಸಿ, ಸಿಮೆಂಟ್ ಪಾಟ್ ನ ಚೂರುಗಳನ್ನು ವಶಕ್ಕೆ ಪಡೆದಿದ್ದಾರೆಂದು ನಂಬಲಾಗುವುದಿಲ್ಲ.

**28.** ಮೇಲೆ ಚರ್ಚಿತ ಅಂಶಗಳಿಂದ ಆರೋಪಿಗಳು ಮತ್ತು ಫ್ರಾಸಾ-1 ರವರ ನಡುವೆ ಜಮೀನಿಗೆ ಸಂಬಂಧಿಸಿದಂತೆ ಈಗಾಗಲೇ ಸಿವಿಲ್ ಪ್ರಕರಣಗಳು ನಡೆಯುತ್ತಿರುವ ಬಗ್ಗೆ ನ್ಯಾಯಾಲಯದಲ್ಲಿ ಒಪ್ಪಿಕೊಂಡಿದ್ದು, ಆ ಬಗ್ಗೆ ಫ್ರಾಸಾ-5 ರವರು ತನಿಖಾಧಿಕಾರಿಯಾಗಿದ್ದು ಯಾವುದೇ ದಾಖಲೆಗಳನ್ನು ಕಲೆ ಹಾಕಿಲ್ಲ. ಕೇವಲ ಫ್ರಾಸಾ-1 ರವರು ನೀಡಿದ ದೂರಿನ ಆಧಾರದ ಮೇಲೆ ಪ್ರಾಥಮಿಕ ತನಿಖೆ ನಡೆಸದೇ ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುವುದು ಕಂಡು ಬರುತ್ತದೆ. ತನಿಖಾಧಿಕಾರಿಯಾದ ಫ್ರಾಸಾ-5 ರವರು ಪ್ರಕರಣವನ್ನು ದಾಖಲಿಸಿ, ತನಿಖೆ ನಡೆಸಿದರೂ ಸಹ ಫ್ರಾಸಾ-1 ಮತ್ತು ಆರೋಪಿಯ ನಡುವೆ ಸಿವಿಲ್ ಪ್ರಕರಣಗಳು ನಡೆಯಿತ್ತಿರುವ ಬಗ್ಗೆ ತಮಗೆ ಏನು ಗೊತಿಲ್ಲ ಎಂದು ಉತ್ತರಿಸಿ, ತನಿಖೆಯಿಂದ ದೂರ ಉಳಿದುಕೊಂಡಿರುವುದು ಕಂಡು ಬರುತ್ತದೆ. ಹೀಗಿರುವಾಗ ಸದರಿ ಪ್ರಶ್ನಿತ ಜಮೀನಿನಲ್ಲಿ ಯಾರು ಉಳುಮೆ ಮಾಡುತ್ತಿದ್ದರು ಎಂದು ಮತ್ತು ಯಾವ ಕಾರಣಕ್ಕೆ ಜಗಳ ನಡೆಯಿತು ಎಂಬ ಬಗ್ಗೆ ಊರಿನ ಗ್ರಾಮಸ್ಥರ ಸಾಕ್ಷ್ಯವನ್ನು ಪಡೆದುಕೊಂಡಿಲ್ಲ. ಪ್ರಸ್ತುತ ಪ್ರಕರಣವೂ ಸಿವಿಲ್ ಸ್ವರೂಪದ ಪ್ರಕರಣವಾಗಿದ್ದು, ಆ ಬಗ್ಗೆ ಯಾವುದೇ ದಾಖಲೆಯನ್ನು ಕಲೆ ಹಾಕಿಲ್ಲ.

**29.** ಬಹುಮುಖ್ಯವಾಗಿ ಫ್ರಾಸಾ-5 ಹೆಚ್.ಕೆ.ರಘು ಪ್ರಕರಣವನ್ನು ದಾಖಲಿಸಿದ ಠಾಣಾಧಿಕಾರಿ ಮತ್ತು ತನಿಖೆ ಮುಂದುವರೆಸಿ, ಅಂತಿಮ ವರದಿಯನ್ನು ಸಲ್ಲಿಸಿಕೊಂಡ

ತನಿಖಾಧಿಕಾರಿಯಾಗಿರುತ್ತಾರೆ. ಪ್ರಾಸಾ-5 ರವರು ತಮ್ಮ ತನಿಖಾ ಕಾಲದಲ್ಲಿ, ತಾವೇ ಪ್ರಕರಣವನ್ನು ದಾಖಲಿಸಿಕೊಂಡು, ತನಿಖೆ ನಡೆಸಿ, ಅಂತಿಮವಾಗಿ ಆರೋಪಿಗಳ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿಕೊಂಡಿರುವುದು ಕಾನೂನಿನಡಿ ಊರ್ಜಿತವಾಗಿಲ್ಲ. ಕಾನೂನು ಪ್ರಕ್ರಿಯೆಯಂತೆ ಯಾವುದೇ ತನಿಖಾಧಿಕಾರಿಯು ತಾನೇ ಫಿರ್ಯಾದನ್ನು ದಾಖಲಿಸಿ, ತನಿಖೆಯನ್ನು ನಡೆಸುವಂತಿಲ್ಲ. ಈ ಕಾನೂನಿನ ಪ್ರಕ್ರಿಯೆ ಪ್ರಾಸಾ-5 ರವರಿಗೆ ತಿಳಿದಿದ್ದರೂ ಸಹ ತನಿಖೆಯನ್ನು ಮುಂದುವರೆಸಿ, ಆರೋಪಿಗಳ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿಕೊಂಡಿರುವುದು ತಾನು ಹಿತಾಸಕ್ತಿವುಳ್ಳ ಸಾಕ್ಷಿದಾರನಾಗಿರುವುದು ತನಿಖೆಯಿಂದ ಕಂಡು ಬರುತ್ತದೆ.

**30.** ಮುಂದುವರೆದು ಪ್ರಾಸಾ-1 ರವರು ತಮ್ಮ ಪಾಟೀ ಸವಾಲಿನಲ್ಲಿ ಆರೋಪಿಗಳು ಮತ್ತು ತಮ್ಮ ನಡುವೆ ಸಿವಿಲ್ ವ್ಯಾಜ್ಯ ಇರುವ ಬಗ್ಗೆ ಒಪ್ಪಿಕೊಂಡಿರುತ್ತಾರೆ. ಮುಂದುವರೆದು ಇದೇ ನ್ಯಾಯಾಲಯದಲ್ಲಿ ಆರೋಪಿಗಳು, ಫಿರ್ಯಾದುದಾರರು ಮತ್ತು ಇತರರ ವಿರುದ್ಧ ಒಂದು ಪ್ರತಿ ದೂರನ್ನು ಹಲ್ಲೆಗೆ ಸಂಬಂಧಿಸಿದಂತೆ ದಾಖಲಿಸಿರುವುದು ಕಂಡು ಬರುತ್ತದೆ. ಈ ಎಲ್ಲಾ ಅಂಶಗಳಿಂದ ಆರೋಪಿಯು ಮತ್ತು ಫಿರ್ಯಾದುದಾರರ ನಡುವೆ ವೈಶಮ್ಯವಿದ್ದು, ಪ್ರಸ್ತುತ ಪ್ರಕರಣ ದಾಖಲಾಗಿರುವುದು ಕಂಡು ಬರುತ್ತದೆ. ಪ್ರಾಸಾ-5 ರವರು ಪ್ರಕರಣವನ್ನು ದಾಖಲಿಸಿದ್ದರೂ ಸಹ ಯಾವುದೇ ಬೆಂಬಲಿತ ದಾಖಲೆಗಳನ್ನು ಕಲೆ ಹಾಕದಿರುವುದು ಕಂಡು ಬರುತ್ತದೆ. ಕೇವಲ ಪ್ರಾಸಾ-1 ರವರ ದೂರಿನ ಆಧಾರದ ಮೇಲೆ ಪ್ರಕರಣವನ್ನು ದಾಖಲಿಸಿರುವುದು ಕಂಡು ಬರುತ್ತದೆ. ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಟ್ಟ ಪ್ರಾಸಾ-1 ರವರನ್ನು ಹೊರತು ಪಡಿಸಿ, ಸದರಿ ಗ್ರಾಮದ ಯಾವುದೇ ಸಾಕ್ಷಿದಾರರು ನ್ಯಾಯಾಲಯದಲ್ಲಿ ಹಾಜರಾಗಿ, ಬೆಂಬಲಿತ ಸಾಕ್ಷ್ಯಗಳನ್ನು ನುಡಿದಿಲ್ಲ. ಈ ಎಲ್ಲಾ ಅಂಶಗಳಿಂದ ಫಿರ್ಯಾದುದಾರರ ದೂರು ಮತ್ತು ದಾಖಲೆಗಳು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿಲ್ಲವೆಂದು ನ್ಯಾಯಾಲಯವೂ ಅಭಿಪ್ರಾಯಿಸಿರುತ್ತದೆ.

**31.** ಪ್ರಾಸಾ-1 ರವರ ಸಾಕ್ಷ್ಯವೂ ನಿಪಿ-1 ಕ್ಕೆ ಅನುಗುಣವಾಗಿಲ್ಲ. ಪ್ರಾಸಾ-1 ಮತ್ತು 2 ರವರ ಮಗ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಟ್ಟಿಲ್ಲ. ಕೇವಲ ಪ್ರಾಸಾ-3 ರವರು ಪ್ರತ್ಯಕ್ಷ ಸಾಕ್ಷಿದಾರರೆಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದರೂ ಸಹ ಅವರು ಬೆಂಗಳೂರಿನಲ್ಲಿ ಕೆಲಸ

ಮಾಡುತ್ತಿರುವ ಬಗ್ಗೆ ಒಪ್ಪಿಕೊಂಡಿರುತ್ತಾರೆ. ಹೀಗಿರುವಾಗ ಪ್ರಕರಣದ ಬಗ್ಗೆ ಬೇರೆ ಯಾವುದೇ ಸ್ವತಂತ್ರ ಸಾಕ್ಷಿದಾರರ ಸಾಕ್ಷ್ಯಗಳು ಲಭ್ಯವಿಲ್ಲದಿರುವುದು ಅಭಿಯೋಜನೆಯ ಪ್ರಕರಣಕ್ಕೆ ಕುಂದುಂಟಾಗಿದೆ. ಈ ಎಲ್ಲಾ ಚರ್ಚಿತ ಅಂಶಗಳಿಂದ ಆರೋಪಿಯ ವಿರುದ್ಧ ಹೊರಿಸಿರುವ ಆರೋಪವೂ ಸುಳ್ಳಿನಿಂದ ಕೂಡಿದ್ದಾಗಿರುತ್ತದೆ. ಕೇವಲ ವಿರೋದೋಕ್ತಿವುಳ್ಳ ಹಾಗೂ ಪ್ರತಿ ದೂರು, ಸಿವಿಲ್ ವ್ಯಾಜ್ಯಗಳು ನಡೆಯುತ್ತಿರುವ ಬಗ್ಗೆ ಫ್ರಾಸಾ-1 ರವರೇ ಒಪ್ಪಿಕೊಂಡಿದ್ದು, ಅವರ ಸಾಕ್ಷ್ಯವನ್ನಾಧರಿಸಿ, ಆರೋಪಿಯು ದೋಷಿಯೆಂದು ಪರಿಗಣಿಸಲಾಗುವುದಿಲ್ಲ. ಈಗಾಗಲೇ ಚರ್ಚಿಸಿದಂತೆ ಅಭಿಯೋಜನೆಯ ಪ್ರಕರಣವೂ ಸಂಶಯದಿಂದ ಕೂಡಿದ್ದು, ಯಾವುದೇ ತಿರುಳಿಲ್ಲವೆಂದು ಅಭಿಪ್ರಾಯಿಸಲಾಗಿದೆ. ಹೀಗಾಗಿ ಆರೋಪಿಯು ತಪ್ಪಿತಸ್ಥರೆಂದು ಪರಿಗಣಿಸಲು ಯಾವುದೇ ಸಾಕ್ಷ್ಯಾಧಾರ ಇಲ್ಲದ ಕಾರಣ ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲರಾಗಿರುತ್ತಾರೆಂದು ಅಭಿಪ್ರಾಯ ಪಡುತ್ತಾ **ಈ ನ್ಯಾಯಾಲಯವು ಅಂಶ-1 ರಿಂದ 4 ನ್ನು ನಕಾರಾತ್ಮಕವಾಗಿ ಉತ್ತರಿಸಲಾಯಿತು.**

**32.** **<u>ಅಂಶ ನಂ.5</u>ಃ-** ಈ ಮೇಲ್ಕಂಡಂತೆ ಚರ್ಚಿಸಿದ ಕಾರಣಗಳಿಂದ ಈ ಕೆಳಕಂಡ ಆದೇಶವನ್ನು ನ್ಯಾಯಾಲಯ ಮಾಡುತ್ತದೆ.

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ-248(1)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಆರೋಪಿಯ ವಿರುದ್ಧ ಭಾರತ ದಂಡ ಸಂಹಿತೆ ಕಲಂ. 323, 326, 504 ಹಾಗೂ 506 ರ ಅಡಿಗಳಲ್ಲಿ ಹೊರಿಸಲಾದಂತಹ ಆರೋಪಗಳಿಂದ ವಿಮುಕ್ತಿಗೊಳಿಸಿ, ಆರೋಪಿಯನ್ನು ಬಿಡುಗಡೆ ಮಾಡಲಾಗಿದೆ.

ಆರೋಪಿಯು ಹಾಗೂ ಅವರ ಜಾಮೀನುದಾರರು ಬರೆದುಕೊಟ್ಟಿರುವಂತಹ ಜಾಮೀನು ಮುಚ್ಚಳಿಕೆಗಳು ಮುಂದಿನ 6 ತಿಂಗಳವರೆಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ-437(ಎ) ರ ಅಡಿಯಲ್ಲಿ ಮುಂದುವರಿಯತಕ್ಕದ್ದು.

ಪಿ.ಎಫ್.ನಂ.108/2017 ರಲ್ಲಿ ವಶಪಡಿಸಿಕೊಂಡಿರುವ ಮು.ಮಾ-1 ಹೊಡೆದಿರುವ ಸಿಮೆಂಟ್ ಪಾಟ್ ನ ಚೂರುಗಳು ಮುಲ್ಯರಹಿತವಾಗಿರುವುದರಿಂದ ಮೇಲ್ಮನವಿ ಅವಧಿ ಮುಗಿದ ನಂತರ, ಅಥವಾ ಮೇಲ್ಮನವಿ ಸಲ್ಲಿಸಿದ್ದರೆ, ಸದರಿ ಮೇಲ್ಮನವಿ ಇತ್ಯರ್ಥವಾದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

**(ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿಸಿ ಅದನ್ನು ತಿದ್ದಿ ಪರಿಷ್ಕರಿಸಿ 2026 ನೇ ಇಸವಿಯ ಜನವರಿ ತಿಂಗಳ 19 ನೇ ದಿನಾಂಕದಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.)**

**(ಪಾರ್ವತಮ್ಮ.ಬಿ.)**
**C/C 1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್ ಸಿ ನ್ಯಾಯಾಲಯ, ಪಾಂಡವಪುರ.**

## <u>ಅನುಬಂಧ</u>

**<u>ಅಭಿಯೋಜನೆ ಪರ ವಿಚಾರಿಸಲಾದ ಸಾಕ್ಷಿಗಳ ಪಟ್ಟಿ:-</u>**

ಪ್ರಾಸಾ-1 ಃ ನಾಗೇಗೌಡ
ಪ್ರಾಸಾ-2 ಃ ಜಯಮ್ಮ
ಪ್ರಾಸಾ-3 ಃ ಶರತ್.ಹೆಚ್.ಎನ್
ಪ್ರಾಸಾ-4 ಃ ಡಾ.ಮಂಜುನಾಥ್
ಪ್ರಾಸಾ-5 ಃ ಹೆಚ್.ಕೆ.ರಘು
ಪ್ರಾಸಾ-6 ಃ ರಂಜಿತ್

**<u>ಆರೋಪಿತರ ಪರವಾಗಿ ವಿಚಾರಿಸಲಾದ ಸಾಕ್ಷಿಗಳ ಪಟ್ಟಿ:-</u>** ಇಲ್ಲ

<u>ಅಭಿಯೋಜನೆ ಪರ ಗುರುತಿಸಲಾದ ದಾಖಲೆಗಳ ಪಟ್ಟಿ:-</u>

ನಿಪಿ-1 ಃ ದುರಾರು
ನಿಪಿ-1(ಎ) ಃ ಪ್ರಾಸಾ-1 ರವರ ಸಹಿ
ನಿಪಿ-1(ಬಿ) ಃ ಪ್ರಾಸಾ-5 ರವರ ಸಹಿ
ನಿಪಿ-2 ಃ ಮಹಜರ್
ನಿಪಿ-2(ಎ) ಃ ಪ್ರಾಸಾ-2 ರವರ ಸಹಿ
ನಿಪಿ-2(ಬಿ) ಃ ಪ್ರಾಸಾ-3 ರವರ ಸಹಿ
ನಿಪಿ-2(ಸಿ) ಃ ಪ್ರಾಸಾ-5 ರವರ ಸಹಿ
ನಿಪಿ-2(ಡಿ) ಃ ಪ್ರಾಸಾ-6 ರವರ ಸಹಿ
ನಿಪಿ-3 ಃ ಗಾಯದ ಪ್ರಮಾಣ ಪತ್ರ
ನಿಪಿ-3(ಎ) ಃ ಪ್ರಾಸಾ-4 ರವರ ಸಹಿ
ನಿಪಿ-3(ಬಿ) ಃ ಪ್ರಾಸಾ-5 ರವರ ಸಹಿ

ನಿಪಿ-4 ಃ ಪ್ರ.ವ.ವರದಿ
ನಿಪಿ-4(ಎ) ಃ ಫ್ರಾಸಾ-5 ರವರ ಸಹಿ
ನಿಪಿ-5 ಃ ಪಿ.ಎಫ್
ನಿಪಿ-5(ಎ) ಮತ್ತು (ಬಿ)ಃ ಫ್ರಾಸಾ-5 ರವರ ಸಹಿಗಳು
ನಿಪಿ-6 ಃ ಡಿಸ್ಚಾರ್ಜ್ ಸಮ್ಮರಿ
ನಿಪಿ-6(ಎ) ಃ ಫ್ರಾಸಾ-5 ರವರ ಸಹಿ
ನಿಪಿ-7 ಮತ್ತು 8ಃ ಎಕ್ಸ್ ರೇ ಪಿಲಿಮ್ ಗಳು

**ಆರೋಪಿತರ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿ:-** ಇಲ್ಲ

**ಗುರುತಿಸಲಾದ ಮುದ್ದೆ ಮಾಲುಗಳು:-**

ಮು.ಮಾ-1 ಃ ಹೊಡೆದಿರುವ ಸಿಮೆಂಟ್ ಪಾಟ್ ನ ಚೂರುಗಳು

**(ಪಾರ್ವತಮ್ಮ.ಬಿ.)**
**C/C 1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್ ಸಿ ನ್ಯಾಯಾಲಯ, ಪಾಂಡವಪುರ.**